ಮೇಲೆ ಕಾಣಿಸಿಕೊಳ್ಳಲಾರಂಭಿಸಿತು. 'ಪೊಲಿ', 'ಎಸಲ್', ಕುರತ್ತಿ, 'ಮುಕ್ಕುತ್ತಿ' ಮತ್ತು 'ಚಂದನಂ' ಎಂಬ ಮಾರ್ಗದಲ್ಲಿ ಈಗ ಮೋಹಿನಿಯಾಟ್ಟಂ ನೃತ್ಯವನ್ನು ಮರುರೂಪಿಸಿರುವೆ. ಹೆಚ್ಚಿನವರು ಅದೇ ಮಾದರಿಯಲ್ಲಿ ನೃತ್ಯ ಪ್ರದರ್ಶನ ಮಾಡುತ್ತಿದ್ದಾರೆ. ಸಾಂಡ್ರಾ ಪಿಷಾರಡಿ, ಪಾರ್ವತಿ ವಲ್ಲಭನ್, ಗೋಪಿಕಾ ಜಿ. ನಾಥ್, ಅನಿಮಾ , ಅನುಪಮ ಮೆನನ್, ಮೀನಾಕ್ಷಿ ಮೆನನ್ ಮುಂತಾದವರು ಪ್ರಸ್ತುತ ಇದೇ ಮಾದರಿಯಲ್ಲಿ ಮೋಹಿನಿಯಾಟ್ಟಂ ಅನ್ನು ದೇಶ ವಿದೇಶಗಳಲ್ಲಿ ಪ್ರಸ್ತುತಪಡಿಸುತ್ತಿರುವುದನ್ನು ನೋಡಲು ಖುಷಿಯಾಗುತ್ತದೆ.

**◆ ಒಂದು ನೃತ್ಯ ಪ್ರಕಾರಕ್ಕೆ ಜೀವನವನ್ನು ಸಮರ್ಪಿಸಿಕೊಂಡು, ಅದರಲ್ಲಿ ಮಾರ್ಪಾಟು ತರುವುದೆಂದರೆ ಇತರ ನೃತ್ಯ ಪ್ರಕಾರಗಳ ಅರಿವು ಚೆನ್ನಾಗಿರಬೇಕು. ಈ ನಿಟ್ಟಿನಲ್ಲಿ ನೀವು ನಡೆಸಿದ ಪ್ರಯತ್ನಗಳೇನು?**

ಚಿಕ್ಕಮ್ಮ, ಅತ್ತೆಯರು ತಿರುವಾತಿರಕ್ಕಳಿ ನೃತ್ಯವನ್ನು ಮಾಡುವಾಗ ಮನದಲ್ಲಿ ಮೂಡಿದ ಅಂಶಗಳೇ ಅದಕ್ಕೆಲ್ಲ ಸೋಪಾನ ಎಂದು ಹೇಳಬೇಕು. ಇದೇ ನೃತ್ಯದ ಬಗ್ಗೆ ತಿರುವನಂತಪುರಂಗೆ ಹೋಗಿ ಭಾನು ಆಶಾನ್ ಅವರ ಬಳಿ ಹೆಚ್ಚಿನ ತರಬೇತಿ ಪಡೆದೆ. ಅಲಪ್ಪುಳದಲ್ಲಿ ಲಕ್ಷ್ಮೀಕುಟ್ಟಿ ಅಮ್ಮ ಅವರು, ಇರಿಂಜಾಲಕುಡದಲ್ಲಿ ಸಾವಿತ್ರಿ ಬ್ರಹ್ಮಿಣೀ ಅಮ್ಮ ಅವರಿಂದ ತರಬೇತಿ ಪಡೆದೆ. ಆಗೆಲ್ಲ ನನ್ನ ಕಲಿಕಾ ಕುತೂಹಲವು ವಿಸ್ತಾರವಾಗಿತ್ತು. ನಂಗಿಯಾರ್ ಕೂತ್ತ್ ನೃತ್ಯದ ಕುರಿತೂ ತಿಳಿದುಕೊಳ್ಳಬೇಕು ಎಂಬ ಹಂಬಲವಾಗಿ ನಾನು ಕೋಟಾಯಂಗೆ ತೆರಳಿ, ಪ್ರಸಿದ್ಧ ನಂಗಿಯಾರ್ ಕೂತ್ತ್ ಗುರುಗಳಾದ ವಿಳ್ಳವತ್ತಟ್ಟು ಕೋಚುಕುಟ್ಟಿ ನಂಗಿಯಾರಮ್ಮ ಅವರನ್ನು ಭೇಟಿಯಾದೆ. ಜೆಮ್‌ಶೆಡ್‌ಪುರದಲ್ಲಿ ಆಚಾರ್ಯ ಕಲಾಮಂದಿರದಲ್ಲಿ ಬಿ.ಬಿ. ಆಚಾರ್ಯ ಅವರ ಮಾರ್ಗದರ್ಶನದಲ್ಲಿ ಒಡಿಸ್ಸಿ ಮತ್ತು ಕಥಕ್ ತರಬೇತಿಯನ್ನೂ ಪಡೆದೆ. ಹೀಗೆ ನನ್ನ ಹುಡುಕಾಟದ ದಿನಗಳು ಬಹಳ ವಿಭಿನ್ನವಾಗಿದ್ದವು. ಸಂಗಂ ಸಾಹಿತ್ಯವನ್ನುಆಧರಿಸಿ ಪ್ರಯೋಗ ಪದ್ಧತಿಯನ್ನು ನಾನು ರೂಪಿಸುವ ವೇಳೆಗೆ ನನ್ನ ಅಧ್ಯಯನವೇ ನನಗೆ ಮೂಲಾಧಾರವಾಗಿತ್ತು. ದೇಹ, ಕಣ್ಣು ಮತ್ತು ಹಸ್ತಾಭಿನಯದ ಹೊಂದಾಣಿಕೆ, ಸಂಯೋಜನೆಯು ಇಡೀ ನೃತ್ಯ ಪ್ರಕಾರಕ್ಕೆ ಹೊಸ ರೂಪು ಕೊಡುವಲ್ಲಿ ಯಶಸ್ವಿಯಾಗಿದ್ದಕ್ಕೆ ಗುರುಗಳ ಆಶೀರ್ವಾದದ ಫಲವೇ ಕಾರಣವಾಗಿದೆ. ಗುರು ಕಲ್ಯಾಣಿ ಕುಟ್ಟಿಯಮ್ಮ ಅವರು ನಿಜಕ್ಕೂ ಮೋಹಿನಿಯಾಟ್ಟಂ ನೃತ್ಯ ಪ್ರಕಾರದ ತಾಯಿ ಎಂದು ಹೇಳಬಹುದು. ಅವರು ಹೇಳಿಕೊಟ್ಟ ಶೈಲಿಯ ಮೂಲಧಾತುವಿಗೆ ಎಲ್ಲಿಯೂ ಭಂಗ ಬಾರದಂತೆ ನಾನು ಬದಲಾವಣೆಗಳನ್ನು ಮಾಡಿದ್ದೇನೆ. ನನ್ನ ಪತಿ ವೇಣುಗೋಪಾಲ್ ಅವರು ಕೂಡಿಯಾಟ್ಟಂ ಕಲಾವಿದರಾದ್ದರಿಂದ ನಮ್ಮ ನಡುವೆ ಕಲಾಪ್ರಕಾರಗಳ ಕುರಿತ ಚರ್ಚೆಗಳು ಸದಾ ಇರುತ್ತವೆ. ಈಗ ಮಗಳು ಕಪಿಲಾ ಕೂಡ ಕೂಡಿಯಾಟ್ಟಂ ಮತ್ತು ನಂಗಿಯಾರ್ ಕೂತ್ತ್ ಕಲಾವಿದೆಯಾಗಿ ಪ್ರದರ್ಶನ ನೀಡುತ್ತಿದ್ದಾಳೆ. ನೃತ್ಯವು ನಮ್ಮ ಬದುಕಿನಲ್ಲಿ ಉಸಿರಿನಂತೆಯೇ ಬೆರೆತುಹೋಗಿದೆ.

**◆ ಮೋಹಿನಿಯಾಟ್ಟಂನಲ್ಲಿ ಬದಲಾವಣೆ ತರುವುದಕ್ಕಾಗಿ ನೀವು ಮಾಡಿದ ಅಧ್ಯಯನಗಳ ಬಗ್ಗೆ ಒಂದಿಷ್ಟು ಹೇಳಬಹುದಾ?**

ಮೊದಲನೆಯದಾಗಿ, ಕೇರಳ ಮತ್ತು ತಮಿಳುನಾಡಿನ ಮಹಿಳೆಯರ ನೃತ್ಯ ಪ್ರಕಾರಗಳ ಬಗ್ಗೆ ನನ್ನ ಗಮನ ಹರಿಯಿತು. ಸಂಗಂ ಸಾಹಿತ್ಯ, 'ಚಿಲಪ್ಪತಿಕಾರಂ' (ಮಲಯಾಳಂ ಉಚ್ಛಾರ) 'ದಶಕುಮಾರ ಚರಿತಂ', ಕುಲಶೇಖರಪ್ಪ ಪೆರುಮಾಳ್, ಮಣಿಪ್ರವಾಳ ಕೃತಿಗಳು, ವ್ಯವಹಾರ ಮಾಲಾ, ಕಾರ್ತಿಕ ತಿರುನಾಳ್ ಬಲರಾಮ ವರ್ಮನ ಬಲರಾಮಭಾರತಮ್, ಕುಂಞನ್ ನಂಬಿಯಾರ್ ಅವರ ತುಳ್ಳಲ್ ಕಥಕಳ್ ಮತ್ತು ಮಹಾರಾಜಾ ಸ್ವಾತಿ ತಿರುನಾಳ್ ಕಾಲ ಹಾಗೂ ನಂತರದ ಕಲಾಮಂಡಲಂ ಕಾಲದವರೆಗೆ ನಾನು ಈ ಲಾಸ್ಯಪ್ರಧಾನ ನೃತ್ಯವಿಧಾನಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

**◆ ದೇಸೀ ಹಾಡುಗಳಿಗೆ ಕೊರಿಯೊಗ್ರಾಫ್ ಮಾಡಿ ಸೈ ಎನ್ನಿಸಿಕೊಂಡಿದ್ದೀರಿ...**

ದೇಸೀ ನೃತ್ಯವೆಂದರೆ ಅಲ್ಲಿ ಬಳಸುವ ಹಿನ್ನೆಲೆ ಸಂಗೀತವೂ ಬಹಳ ಮುಖ್ಯವಾಗುತ್ತದೆ. ನಾನು ಕುರುಮ್ಕುಳಲ್ ಮತ್ತು ದೇವಸ್ಥಾನ ವಾದ್ಯ